# ಕಲ್ಲಂಬಾಳಿನ 'ಕಲಿಯುಗ ಕಾಮೇಶ್ವರ' ದೇವಾಲಯದ ಶಾಸನಗಳು

**ಮಲ್ಲೇಶ ಸಿ.**
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಭಾಗ, ಮಹಾರಾಜ ಕಾಲೇಜು
ಮೈಸೂರು.
malleshkanda@gmail.com

ಇತಿಹಾಸದ ಪ್ರಮಾಣಭೂತವಾದ ಪುನರ್ ನಿರ್ಮಾಣಕ್ಕೆ ಇರುವ ಅತಿ ಪ್ರಮುಖವಾದ ಆಧಾರಗಳೆಂದರೆ ಶಾಸನಗಳು. ಕನ್ನಡ ಸಾಹಿತ್ಯ, ಕಲಾಕೃತಿಗಳು, ನಾಣ್ಯಗಳು, ವಿದೇಶಿಯಾತ್ರಿಕರ ವರದಿಗಳು, ಉತ್ಖನನಗಳು ಇವೆಲ್ಲವೂ ಸಹಾಯಕವಾದರೂ ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಪರಂಪರೆಯನ್ನು ತಿಳಿಯುವಂತಾದುದು ಶಾಸನಗಳಿಂದಲೆ ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿಕೊಟ್ಟಿತು. ಕಲ್ಲಂಬಾಳಿನ ಕಾಮೇಶ್ವರ ದೇವಾಲಯದ ಬಳಿ ಕೆಲವು ಶಾಸನಗಳು ಕಂಡು ಬರುತ್ತವೆ. ಇವು ಊರಿನ ಐತಿಹಾಸಿಕ ಹಿನ್ನಲೆ ಮತ್ತು ದೇವಾಲಯದ ಪ್ರಾಚೀನತೆ ತಿಳಿಸುತ್ತದೆ. ಕಲ್ಲಂಬಾಳಿನ ಶಾಸನಗಳ ಅಧ್ಯಯನಕ್ಕೂ ಮುಂಚೆ ಶಾಸನಗಳ ಅರ್ಥ ಮತ್ತು ಮಹತ್ವ ತಿಳಿಯುವುದು ಅವಶ್ಯವೆಂದೆನಿಸುತ್ತದೆ.

**ಶಾಸನ ಅರ್ಥ:** ಶಾಸನ ಎಂಬ ಶಬ್ದ ಭಾರತದಲ್ಲಿ ಪ್ರಾಚೀನಕಾಲದಿಂದಲೂ ಇದೆ. ನಿಘಂಟುಗಳಲ್ಲಿ, ಸ್ಮೃತಿ ಗ್ರಂಥಗಳಲ್ಲಿ ಶಾಸ್ತ್ರಕೃತಿಗಳಲ್ಲಿ ಈ ಪದ ಬಳಕೆಯಾಗಿದೆ. ಶಾಸನ ಎಂಬ ಪದಕ್ಕೆ ಇಂಗ್ಲಿಷ್‌ನಲ್ಲಿ 'Inscription', 'epigraph' ಎಂಬ ಪದಗಳು ಬಳಕೆಯಲ್ಲಿವೆ. ಪ್ರಾಚೀನಕಾಲದಲ್ಲಿ ಶಾಸನಶಾಸ್ತ್ರದ ಅರ್ಥ, ವ್ಯಾಪ್ತಿ ಸೀಮಿತವಾಗಿತ್ತು 'Inscription' ಎಂಬುದರ ಹಿನ್ನಲೆಯಲ್ಲಿ ಶಾಸನದ ಅರ್ಥವ್ಯಾಪ್ತಿ ಹೆಚ್ಚಿದೆ.

ಶಾಸನ ಎಂದರೆ ಮೂಲಾರ್ಥ ರಾಜಾಜ್ಞೆ ಎಂದೇ ಇತ್ತು. ಇಂದೂ ಕೂಡ ಶಾಸನ ಸಭೆ, ಶಾಸಕ ಎಂಬ ಮಾತುಗಳು ಪ್ರಚಲಿತದಲ್ಲಿವೆ. ಆದರೆ ಆ ಹಂತದಲ್ಲಿ ಆ ರಾಜಾಜ್ಞೆಗಳು ಶಾಶ್ವತ ಸಾಮಾಗ್ರಿಯ ಮೇಲೆ ಬರೆಯಲ್ಪಡುತ್ತಿರಲಿಲ್ಲ ತಾಳಪತ್ರ, ಕಡತ ಮುಂತಾದವುಗಳ ಮೇಲೆ ಬರೆಯಲ್ಪಡುತ್ತಿದ್ದವು. ಎರಡನೇ ಹಂತದಲ್ಲಿ ದಾನ ಸಂಬಂಧವಾದ ಬರವಣಿಗೆಯನ್ನು ಶಾಸನ ಎಂದು ಕರೆದರು. ರಾಜ ಕೊಟ್ಟ ದಾನಗಳಲ್ಲದೆ ಇತರರು ನೀಡಿದ ದಾನಗಳಿಗೂ ಇದು ಅನ್ವಯವಾಯಿತು. ಕಾಲಕ್ರಮೇಣ ರಾಜಶಾಸನ, ದಾನಶಾಸನ, ಅಲ್ಲದೆ ಶಾಶ್ವತವಾದ ಸಾಮಾಗ್ರಿಯ ಮೇಲೆ ಬರೆಯಲ್ಪಟ್ಟವೆಲ್ಲವನ್ನು ಶಾಸನ ಎಂದು ಕರೆಯಲಾಯಿತು. ಸಾಮಾನ್ಯವಾಗಿ ನಾಶವಾಗುವಂತಹ ತಾಳೇಗರಿ, ಬೂರ್ಜಪತ್ರ, ಕಾಗದ, ಮೊದಲಾದವುಗಳ ಮೇಲಿನ ಬರಹಗಳನ್ನು ಬಿಟ್ಟು ಬಹುಕಾಲ ಉಳಿಯುವಂತಹ ಶಿಲೆ, ಲೋಹಗಳು ಮೊದಲಾದವುಗಳ ಮೇಲಿನ ಬರಹವನ್ನು ಶಾಸನಗಳೆಂದು ಕರೆಯಬಹುದು.

ಹೀಗೆ ಶಾಸನ ಎಂದರೆ– ಪ್ರಾಚೀನ ಭಾರತೀಯರಿಗೆ ರಾಜಾಜ್ಞೆ, ದಾನ ಶಾಸನಗಳಿಗೆ ಸೀಮಿತವಾಗಿದ್ದುದು ಆಧುನಿಕ ಕಾಲದಲ್ಲಿ ಶಾಶ್ವತವಾಗಿ ಉಳಿದು ಬರುವ ಯಾವುದೇ ಸಾಮಗ್ರಿಯ ಮೇಲೆ ಕೆತ್ತಿದ ಯಾವುದೇ ಬರಹ ಎಂಬ ವಿಶಾಲ ಅರ್ಥ, ವ್ಯಾಪ್ತಿ ಹೊಂದಿದೆ.

**ಶಾಸನಗಳ ಮಹತ್ವ:**

ಭಾರತದಲ್ಲಿ ದೊರೆಯುವ ಅನೇಕ ಚಾರಿತ್ರಿಕ ಆಂಶಗಳಲ್ಲಿ ಶಾಸನಗಳಿಗೆ ಹೆಚ್ಚು ಪ್ರಾಮುಖ್ಯತೆ ಇದೆ. ಇಲ್ಲಿ ದೊರೆಯುವ ನಾಣ್ಯಗಳಿಗಿಂತ ಹೆಚ್ಚು ಮಾಹಿತಿಯನ್ನೊಳಗೊಂಡಿದೆ, ಉತ್ಖನನದಲ್ಲಿ ಸಿಗುವ ಸಂಗತಿಗಳಿಗಿಂತ ಹೆಚ್ಚಿನ ನಿರ್ದಿಷ್ಟತೆ ಇದೆ. ಕಾವ್ಯ ಹಸ್ತಪ್ರತಿಗಿಂತ ಹೆಚ್ಚಿನ ಪ್ರಾಮಾಣಿಕತೆ ಉಳಿಸಿಕೊಂಡಿದೆ. ಹೀಗಾಗಿ ಭಾರತೀಯ ಚರಿತ್ರೆಯನ್ನು ಕಟ್ಟಿಕೊಳ್ಳಲು ಶಾಸನಗಳು ಸಶಕ್ತ ಸಾಮಾಗ್ರಿಯೆನಿಸಿಕೊಂಡಿದೆ. ಶಾಸನಗಳ ಮಹತ್ವ ಸಾಹಿತ್ಯಿಕವಾಗಿ ಗೌಣ ಅಂದರೆ ಸಾಹಿತ್ಯದ ದೃಷ್ಟಿಯಿಂದ ಶಾಸನಗಳನ್ನು ಅಧ್ಯಯನ ಮಾಡಬಾರದು ಎಂದೇನಲ್ಲ. ಉತ್ತಮವಾದ ಸಾಹಿತ್ಯ ಅಂಶಗಳಿಂದ ಕೂಡಿದ ಶಾಸನಗಳು ಇಲ್ಲವೆಂದಲ್ಲ ಸಾಹಿತ್ಯಾಂಶಗಳಿಗಿಂತ ಅವು ಕೊಡುವ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ವಿವರಗಳು ಅತ್ಯಂತ ಪ್ರಮುಖವಾದವು ಏಕೆಂದರೆ ಶಾಸನಗಳಷ್ಟು ಪ್ರಾಚೀನವಾದ ಸಾಮಾಜಿಕ, ರಾಜಕೀಯ, ಮತ್ತು ಸಾಂಸ್ಕೃತಿ ವಿವರಗಳನ್ನು ಕೊಡುವ ಮತ್ತೊಂದು ಆಕರವಿಲ್ಲ.

ನಮ್ಮ ನಾಡಿನ ಜನ ಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಇವುಗಳಿಂದ ನೂರಾರು ರಾಜರ ಇತಿಹಾಸವನ್ನು ಅವರು ಪರಸ್ಪರ ನಡೆಸಿದ ಘೋರ ಯುದ್ಧಗಳನ್ನೂ ಅವರ ಕಾಲ್ಪನಿಕ ಪ್ರಶಂಸೆಗಳನ್ನು ಮಾತ್ರ ಅರಿಯಬಹುದೇ ಹೊರತು, ಆ ಕಾಲದ ಒಳ ಆಡಳಿತ, ವ್ಯಾಪಾರ, ಸಾಮಾಜಿಕ ವ್ಯವಸ್ಥೆಗಳು ಧಾರ್ಮಿಕ ಪರಿವರ್ತನೆಗಳು ಮತ್ತು ತಿಕ್ಕಾಟಗಳು – ಈ ವಿಷಯಗಳಲ್ಲಿ ಶಾಸನಗಳಿಂದ ನಮಗೆ ಯಾವ ಉಪಯೋಗವೂ ಇಲ್ಲವೆಂಬ ಭಾವನೆ ಕೆಲವು ವಿದ್ವಾಂಸರಲ್ಲಿ ಇದ್ದಿತು. ಆದರೆ ಈ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯಗಳು ಒಂದೆರಡು ಕಾಣಿಸಿಕೊಂಡಿದ್ದವು. "ಶಾಸನಗಳೇನಿದ್ದರೂ ಜನರ ನೀತಿ, ನಡವಳಿಕೆಗಳು, ಮತ ತತ್ತ್ವಗಳು ಅವರ ಕಲೆಗಳು ಇವುಗಳನ್ನು ತಿಳಿಯ ಬಹುದೇ ಹೊರತು, ಇಲ್ಲಿ ಆಳಿದ ರಾಜರು ಅವರಿಗೆ ಸಂಬಂಧಿಸಿದಂತ ಯುದ್ಧ ಸಂಗತಿಗಳು ಬೇರೆ ಬೇರೆ ರಾಜನೀತಿಗಳ ಪರಿಣಾಮಗಳು ಈ ವಿಷಯಗಳನ್ನು ಶಾಸನಾಧ್ಯಯನದಿಂದ ಪಡೆಯಬಹುದೆಂಬ ಅಪೇಕ್ಷೆಯು ನಿರೀಕ್ಷಣೆಗೆ ಮೀರಿದ್ದು."[12] ಶಾಸನಗಳು ಆಗ ತಾನೆ ಪ್ರಕಟವಾಗಲಾರಂಭವಾಗಿದ್ದ ಕಾಲದಲ್ಲಿ ಇಂತಹ ಅಭಿಪ್ರಾಯವಿದ್ದಿತು. ಆದರೆ ಶಾಸನಗಳು ಯಾವ ವಿಷಯಗಳನ್ನು ಪ್ರಧಾನವಾಗಿ ನಿರೂಪಿಸಲು ಹೊರಟಿರುತ್ತವೆಯೋ ಅವುಗಳಿಗಿಂತ ಅನುದ್ದೇಶಕ ಪೂರ್ವಕವಾಗಿಯೂ, ಪ್ರಾಸಂಗಿಕವಾಗಿಯೂ ಅವು ಕೊಡುವ ವಿವರಗಳು ನಮಗೆ ಬಹು ಅಮೂಲ್ಯವಾಗಿರುತ್ತವೆ.

ಶಾಸಸನಗಳಿಂದ ನೂರಾರು ರಾಜರುಗಳ, ಮಂತ್ರಿಗಳ, ಸೇನಾಪತಿಗಳ ಅನೇಕಾನೇಕ ಯುದ್ಧ ಸಂಧಿವಿಚಾರಗಳು ತಿಳಿದು ಬರುತ್ತವೆ. ಹೀಗಾಗಿ ಶಾಸನಗಳು ದೊರೆಯದೇ ಹೋಗಿದ್ದರೆ ಭಾರತದ ಚರಿತ್ರೆ ಮುಪ್ಪಾಗುತ್ತಿತ್ತು ಎಂಬುದರಲ್ಲಿ ಸಂಶಯವಿಲ್ಲ. ಧರ್ಮಗಳ ಏರಿಳಿತ ಮತ್ತು ಆಕ್ರಮಣ ಶಾಸನಗಳ ಮೂಲಕ ತಿಳಿಯುತ್ತದೆ. ಮುಸ್ಲಿಂ ದೊರೆಗಳು ಹಿಂದು ದೇವಾಲಯಕ್ಕೆ ನೀಡಿದ ದಾನ, ದತ್ತಿಗಳನ್ನು ಕೊಟ್ಟ ಪ್ರಾಸ್ತಪ ತಿಳಿಯುತ್ತದೆ. ಜೊತೆಗೆ ಒಂದು ಶಾಸನ ಒಂದು ಕಾಲದ, ಒಂದು ಸಮಾಜದ ಸಂಸ್ಕೃತಿಯನ್ನು ಪರಿಣಾಮಕಾರಿಯಾಗಿ ಹಿಡಿದಿರುವುದು ಕಾಣುತ್ತದೆ. ಶಾಸನಗಳು ಬರೀ ರಾಜರುಗಳ ಯುದ್ಧ, ಸೋಲು–ಗೆಲುವು, ದಾನ, ದತ್ತಿಗಳ ಬಗ್ಗೆ ಮಾತ್ರವಲ್ಲದೆ ಭಾಷೆ ಮತ್ತು ಸಾಹಿತ್ಯದ ಬಗೆಯು ತಿಳಿಸುತ್ತದೆ. ಯಾವುದೆ ಭಾಷೆಯಲ್ಲಿ ಶಾಸನಗಳು ಸಾಮಾನ್ಯವಾಗಿ ಮೊದಲ ದಾಖಲೆಗಳಾಗಿವೆ. ಒಂದು ಭಾಷೆ ಅಥವಾ ವಿವಿಧ ಘಟ್ಟಗಳನ್ನು ರೂಪಿಸಲು ಶಾಸನಗಳು ಮುಖ್ಯ. ಒಂದು ಪ್ರದೇಶದಲ್ಲಿ ಒಂದು ಕಾಲದಲ್ಲಿ ಬಳಕೆಯಲ್ಲಿದ್ದ ಭಾಷೆಯ ವಿಷಯಗಳು ಕೂಡ ಶಾಸನಗಳಿಂದ ತಿಳಿದುಬರುತ್ತದೆ. ಹಾಗಾಗಿ ಭಾಷಿಕ ಸ್ವರೂಪವನ್ನು ರೂಪಿಸಲು ಶಾಸನಗಳನ್ನ ಬಿಟ್ಟು ಮತ್ತೊಂದು ಆಕರವಿಲ್ಲ. ಆಗೆಯೇ ಐಹೊಳೆ ಶಾಸನ ಬರೆದ ರವಿಕೀರ್ತಿ, ಕುರ್ಕ್ಯಾಲ ಜಿನವಲ್ಲಭನ, ಗೊಮ್ಮಟ ಸ್ತುತಿ– ಗೊಪ್ಪಣ ಇವರು ಕಾವ್ಯಗಳು ಯಾವುದೇ ಚಂಪೂ ಕವಿಯ ಕಾವ್ಯಗಳಿಗೆ ಕಡಿಮೆ ಇಲ್ಲವೆಂಬಂತಿವೆ.

ಒಟ್ಟಿನಲ್ಲಿ ಶಾಸನಗಳನ್ನು ನಾನಾ ಧೃಷ್ಟಿಯಿಂದ ಅಧ್ಯಯನ ಮಾಡಲು ಸಾಧ್ಯವಾಗಿದೆ. ಹೀಗೆ ಶಾಸನಗಳು ಅನೇಕ ಮುಖದ ಮಾಹಿತಿಯನ್ನು ಒಳಗೊಂಡಿವೆ. ಪ್ರಾಚೀನ ಭಾರತದ ಸಾಮಾಜಿಕ ಹಾಗು ಸಾಂಸ್ಕೃತಿಕ ಸಂಗತಿಗಳು ಕೂಡ ಅಲ್ಲಿ ಗೋಚರವಾಗುತ್ತವೆ. ಚಿದಾನಂದಮೂರ್ತಿ ರವರು "ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಪ್ರಬಂಧವನ್ನೆ ರಚಿಸಿರುವುದನ್ನ ನೋಡಬಹುದಾಗಿದೆ.

**ಕಲ್ಲಂಬಾಳಿನ ಶಾಸನಗಳು**

- **ಕಲ್ಲಂಬಾಳಿನ ಕಾಮೇಶ್ವರ ದೇವಾಲಯದ ಒಂದನೇ ಶಾಸನ**

ಕಲ್ಲಂಬಾಳು ಗ್ರಾಮ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿಗೆ ಸೇರಿದ ಒಂದು ಹಳ್ಳಿ. ಶಾಸನ ಗ್ರಾಮದ ಕಲಿಯುಗ ಕಾಮೇಶ್ವರ ದೇವಸ್ಥಾನದ ಬಳಿ ದೊರೆತಿದೆ. ಇಲ್ಲಿ ಈ ಶಾಸನಗಳ ಜೊತೆಗೆ ಇನ್ನೂ ಅನೇಕ ಶಾಸನಗಳು ದೊರೆತ್ತಿದ್ದು, ಶಾಸನಗಳು ದೇವಾಲಯದ ಮಹತ್ವದ ಜೊತೆಗೆ ನಮ್ಮ ಸಂಸ್ಕೃತಿಯ ಮೇಲೆ ಅಪಾರ ಬೆಳಕನ್ನು ಚೆಲ್ಲುತ್ತವೆ.

ಈ ಶಾಸನ ಶಿಲಾಶಾಸನವಾಗಿದೆ, ಇದು ಗದ್ಯಶಾಸನವಾಗಿದ್ದು ಸಂಸ್ಕೃತ, ಕನ್ನಡ ಭಾಷೆಗಳು ಇಲ್ಲಿ ಕಂಡುಬುತ್ತದೆ. ಈ ಶಾಸನವನ್ನು ರಚಿಸಿದವರು ಅಂದರೆ ಶಾಸನದ ಕವಿ, ಶಾಸನವನ್ನು ಕೆತ್ತಿದ ರೂವಾರಿ ಮತ್ತು ಬರೆದ ಲಿಪಿಕಾರ ಯಾರೆಂಬುದು ತಿಳಿದುಬರುವುದಿಲ್ಲ. ಈ ಶಾಸನದಲ್ಲಿ ಬಾಣನ 'ಹರ್ಷಚರಿತ್ರೆ'ಯ ಶಿವ ಸ್ತುತಿ ಕಂಡುಬರುತ್ತದೆ. ಜೊತೆಗೆ ಶಾಸನದ ಕೊನೆಯಲ್ಲಿ ಶಪಶಯನ ವಾಕ್ಯವಿದೆ. ಈ ಶಾಸನ ಮೊದಲು 'ಎಪಿಗ್ರಾಫಿಯ ಕರ್ನಾಟಕದ' ಮೂರನೆ ಸಂಪುಟದಲ್ಲಿ ಪ್ರಕಟಿಸಲಾಗಿದೆ.

**ಶಾಸನದ ಕಾಲ:** ಈ ಶಾಸನ ಹೊಯ್ಸಳ ಪ್ರಸಿದ್ಧ ದೊರೆ 'ಎರಡನೇ ವೀರಬಲ್ಲಾಳ'ನ (1173–1220) ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಇದು ಕಲ್ಲಂಬಾಳಿನ ಕಾಮೇಶ್ವರ ದೇವಸ್ಥಾನಕ್ಕೆ ದತ್ತಿ ಕೊಟ್ಟ ವಿಚಾರವನ್ನು ತಿಳಿಸುತ್ತದೆ. ಹಾಗಾಗಿ ಈ ಶಾಸನದ ಕಾಲವನ್ನು ಖಚಿತವಾಗಿ ತಿಳಿಯಬಹುದಾಗಿದೆ.

ಈ ಶಾಸನದ ಕಾಲ ಶಕವರ್ಷ 1133 ಪ್ರಜಾಪತಿ ಸಂವತ್ಸರದ ಬಾದ್ರಪದ ಬಹುಳ ಏಕಾದಶಿಯ ಆದಿವಾರ ಪುಷ್ಯ ನಕ್ಷತ್ರ. ಇದು ಸೆಪ್ಟಂಬರ್ 4ರ ಭಾನುವಾರ 1211ಕ್ಕೆ ಸರಿಹೊಂದುತ್ತದೆ. ಹೀಗಾಗಿ ಈ ಶಾಸನದ ಕಾಲ 1211 ಎಂದು ಹೇಳಬಹುದಾಗಿದೆ.

**ಶಾಸನದ ಸ್ವರೂಪ:** ಕಾಮೇಶ್ವರ ದೇವಸ್ಥಾನದ ಬಳಿ ಇರುವ ಈ ಶಾಸನ ಶಿಲಾ ಶಾಸನವಾಗಿದೆ. ಸಂಸ್ಕೃತ ಮತ್ತು ಕನ್ನಡ ಭಾಷೆಯನ್ನು ಹೊದಿದೆ. ಈ ಶಾಸನದಲ್ಲಿ ಎರಡು ಹಂತಗಳಿವೆ. ಮೂದಲ ಹಂತದಲ್ಲಿ ಶಿವಲಿಂಗ, ಈ ಲಿಂಗದ ಎಡಕ್ಕೆ ದೀಪದ ಕಂಬವಿದೆ ಮತ್ತೆ ಶಿವಲಿಂಗ ಬಲಕ್ಕೆ ಮಹಿಳೆಯ ಚಿತ್ರ, ಪಕ್ಕದಲ್ಲಿ ಕತ್ತಿ ಇದರ ಪಕ್ಕದಲ್ಲಿ ಹಸು–ಕರುವಿನ ಚಿತ್ರವನ್ನು ಕೆತ್ತಲಾಗಿದೆ. ನಂತರದ ಹಂತದಲ್ಲಿ ಬರವಣಿಗೆ ಕಂಡುಬರುತ್ತದೆ. 26 ಸಾಲುಗಳ ಬರವಣಿಗೆ ಇದೆ. ಈ ಬರವಣಿಗೆಯಲ್ಲಿ ಮೂರು–ನಾಲ್ಕು ಭಾಗಗಳು ಬರುತ್ತವೆ. ಮೊದಲು ಶಿವ ಸ್ತುತಿ ಕಂಡು ಬರುತ್ತದೆ.

**"ನಮಃಸ್ತುಂಗ ಶಿರಸ್ತುಂಗ ಚಂದ್ರಚಾಮರಚಾರವೇ**
**ತ್ರೈಲೋಕ್ಯನಗರಾರಂಭಂ ಮೂಲ ಸ್ತಂಭಾಯ ಶಂಭವೇ"**

ಸಂಸ್ಕೃತದ ಬಾಣನ 'ಹರ್ಷಚರಿತ್ರೆ' ಈ ಶ್ಲೋಕ ಕಂಡುಬರುತ್ತದೆ. ನಂತರ ಹೊಯ್ಸಳ ವೀರಬಲ್ಲಾಳನ ಸ್ತುತಿ ಅಂದರೆ ಅವನ ಹೊಗಳಿಕೆ ನಂತರ ಶಾಸನದ ಕಾಲವನ್ನು ತಿಳಿಸಲಾಗಿದೆ. ಈತನ ಅಥವಾ ನುಗುನಾಡಿನ ಸರ್ವಾಧಿಕಾರಿಯಾದ ಹಿರಿಯ ದಂಡನಾಯಕ ಗೋವಿಂದಮಯ್ಯ ಆತನ ತಮ್ಮ ಮಂಚಯ್ಯನ ಪ್ರಸ್ತಾಪದ ನಂತರ ದೇವಾಲಯಕ್ಕೆ ಕೊಟ್ಟ ದಾನದ ವಿಚಾರ ಕೊನೆಯಲ್ಲಿ ಶಾಪಶಯನ ವಾಕ್ಯವಿರುವುದನ್ನು ಗಮನಿಸಬಹುದು. ಈ ಶಾಸನದಲ್ಲಿ ಪ್ರಾಸ ಪಾಲನೆ ಇಲ್ಲದ ಕಾರಣ ಇದೊಂದು ಗದ್ಯ ಶಾಸನ ಎಂದು ಹೇಳಬಹುದಾಗಿದೆ. ಇದು ಹೊಯ್ಸಳ ಕಾಲದ ಲಿಪಿಯಾಗಿದೆ.

**ಶಾಸನದ ವಿಷಯ ವಸ್ತು ಅಥವಾ ಶಾಸನದ ಸಾರಾಂಶ:**

ಈ ಶಾಸನದ ಆರಂಭದಲ್ಲಿ ಶಿವನ ಸ್ತುತಿಯನ್ನು ಹೊಂದಿದೆ. ಆ ಬಳಿಕ ಆಗ ಆಳುತ್ತಿದ್ದ ಹೊಯ್ಸಳ 2ನೇ ವೀರಬಲ್ಲಾಳನ ಸ್ತುತಿ ಬಂದಿದೆ. ಅವನ ಅನೇಕಾನೇಕ ಬಿರುದುಗಳು ವರ್ಣಿತ ಗೊಂಡಿದ್ದು.

**"ಶ್ರೀ ಪೃಥ್ವಿವಲ್ಲಭಂ ಮಹಾರಾಜಾಧಿರಾಜಪರಮೇಶ್ವರಂ ಧ್ವಾರಾವತೀಪುರವರಾಧೀಶ್ವರಂ ಯಾದವಕುಳಾಂಬರದ್ಯುಮಣಿ ಸಮ್ಯಕ್ತ ಚೂಡಾಮಣಿ ಮಲೆರಾಜರಾಜ ಮಲಪರೊಳಗಣ್ಡ**

**ಕದನಪ್ರಚಂಡನಸಹಾಯಶೂರ ಶನಿವಾರ ಸಿದ್ಧಿ ಗಿರಿದುರ್ಗಮಲ್ಲ ಚಲದಂಕ ರಾಮನೇಕಾಂಗ ವೀರ**

**ವೀರ ನಿಶ್ಯಂಕಂಕಪ್ರತಾಪಚಕ್ರವರ್ತಿ......"** ಎಂಬುದಾಗಿ ವೀರಬಲ್ಲಾಳನನ ಸ್ತುತಿ ಇದೆ.

ನಂತರ ವೀರಬಲ್ಲಾಳನ ಅಧೀನ ಸರ್ವಾಧಿಕಾರಿಯಾದ ಹಿರಿಯ ದಂಡನಾಯಕ ಗೋವಿಂದಮಯ್ಯ, ಇತನ ತಮ್ಮ ಮಂಚಯ್ಯ ದಂಡನಾಯಕನ ಪ್ರಸ್ತಾಪವಿದೆ. ಇವರುಗಳ ಜೊತೆಗೆ 'ಶ್ರೀಮಚವಂಶ'ದ ಒಂಕಗೌಡ ಹಾಗೂ ಕಲ್ಲಂಬಾಳಿನ ವ್ಯಾಪಾರಿಗಳು ಎಲ್ಲಾ ಸೇರಿ ಕಲ್ಲಂಬಾಳಿನ ಕಾಮೇಶ್ವರನ ನಿತ್ಯ ನೈವೇಧ್ಯಕ್ಕೆ ಈ ನುಗುನಾಡಿನ ಕುಂದೂರು ಗ್ರಾಮವನ್ನು ದತ್ತಿ ಕಟ್ಟ ಉಲ್ಲೇಖವಿದೆ. ಜೊತೆಗೆ ಕೊನೆಯಲ್ಲಿ ಶಾಪಶಯನ ವಾಕ್ಯವಿದೆ.

**"ಯೀ ಧರ್ಮ್ಮತವನಾವನಾನುಂ ವಳಿಹಿದವನು ವಾರಣಾಸಿಯಲು ಕವಿಲೆಯಂ**

**ಬ್ರಾಹ್ಮಣರುವಂ ಕೊಂದ ಪಾಪದಲು ಹೋಹ.."** ಎಂದಿದೆ. ಅಂದರೆ ವಾರಣಾಸಿಯ ಬ್ರಾಹ್ಮಣರನ್ನು ಕೊಂದ ಪಾಪ ಈ ಶಾಸನವನ್ನು ಅಥವಾ ಈ ನಿಯಮವನ್ನು ಮೀರಿದವನಿಗೆ ಬರುತ್ತದೆ ಎಂದರ್ಥ.

- **ಕಲ್ಲಂಬಾಳಿನ ಕಾಮೇಶ್ವರ ದೇವಾಲಯದಲ್ಲಿರುವ 2ನೇ ಶಾಸನ:**

ಈ ಶಾಸನ ಕಾಮೇಶ್ವರ ದೇವಸ್ಥಾನದ ದಕ್ಷಿಣ ಭಾಗದಲ್ಲಿದೆ. ಇದು ಸಹ ಶಿಲಾ ಶಾಸನವಾಗಿದೆ. ಇದರಲ್ಲೂ ಸಹ ಸಂಸ್ಕೃತದ ಬಾಣನ 'ಹರ್ಷಚರಿತ್ರೆ'ಯ ಶಿವ ಸ್ತುತಿ ಕಂಡುಬರುತ್ತದೆ. ಅಲ್ಲದೆ ಈ ಶಾಸನ ಕೂಡ 2ನೇ ವೀರಬಲ್ಲಾಳನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಜೊತೆಗೆ ವಿಷಯ ಅಥಾವ ಶಾಸನ ವಸ್ತು ಅದೇ ಆಗಿದೆ. ಆದರೂ ಸಹ ಸ್ವರೂಪ, ವಿಷಯ ನಿರೂಪಣೆ, ಕಾಲದಲ್ಲಿ ಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ.

**ಶಾಸನದ ಕಾಲ:** ಈ ಶಾಸನವನ್ನು ಮೊದಲನೆಯ ಶಾಸನ ನಿರ್ಮಿಸಿದ 6–7 ವರ್ಷಗಳಲ್ಲಿ ಹಾಕಿಸಲಾಗಿದೆ. ಹಾಗಾಗಿ ಇದರ ಕಾಲ ಶಕವರ್ಷ 1140ನೆಯ ಈಶ್ವರ ಸಂವತ್ಸರದ ಮಾಘದ ಪೌರ್ಣಮಿಯ ಆದಿವಾರ, ಆಶ್ಲೇಷ ನಕ್ಷತ್ರ ಎಂದಿದೆ. ಇದು 1218 ನೇಯ ಜನವರಿ 13ರ ಶನಿವಾರಕ್ಕೆ ಸರಿಹೊಂದುತ್ತದೆ. ಆಗಾಗಿ ಈ ಶಾಸನದ ಕಾಲ ಕ್ರಿ.ಶ. 1218 ಎಂದು ಹೇಳಬಹುದು.

**ಶಾಸನದ ಹಿನ್ನೆಲೆ, ಸ್ವರೂಪ ಮತ್ತು ಸರಾಂಶ:** ಕ್ರಿ.ಶ.1218ರ ಶಾಸನದಲ್ಲಿ ಮೂರು ಭಾಗಗಳು ಕಂಡುಬರುತ್ತದೆ. ಈ ಶಾಸನ ಮೇಟುಕಂಬದ ರೀತಿಯಲ್ಲಿದೆ. ಇದರಲ್ಲಿ ಮೂರು ಭಾಗಗಳಿವೆ. ಮೇಲ್ಗಡೆ ಭಾಗ ಕಮಾನಿನ ಆಕಾರವುಳ್ಳ ಮುಕುಟ, ಅಲ್ಲಿಯೇ ಒಂದು ಶಿವಲಿಂಗವಿದೆ. ಈ ಶಿವಲಿಂಗದ ಎಡಕ್ಕೆ ಒಂದು ಹಸು, ಹಸುವಿನ ಬಳಿ ಹಾಲುಣ್ಣುತ್ತಿರುವ ಕರುವಿದೆ. ಹಾಗೆಯೇ ಲಿಂಗದ ಬಲಕ್ಕೆ ಮಹಿಳೆ ಏನ್ನನ್ನೊ ಸುರುಯುತ್ತಿರುವ ಚಿತ್ರವಿದೆ. ಶಿವ ಲಿಂಗದ ಮೇಲಿನ ಅಕ್ಕ–ಪಕ್ಕದಲ್ಲಿ ಸೂರ್ಯ, ಚಂದ್ರ ಚಿತ್ರವಿದೆ. ನಡುವಣ ಭಾಗ ಫಲಕ ಆದರ ಮೇಲೆ ಬರಹವಿದೆ. ಈ ಬರಹ ಎನೆಂದರೆ ಶಿವಸ್ತುತಿ. ಕೆಳಭಾಗ ಹಾಸುಗಲ್ಲು ಇದರಲ್ಲಿ ಬರಹಗಳಿವೆ.

ಈ ಶಾಸನ 33 ಸಾಲುಗಳ್ಳದ್ದಾಗಿದೆ. ಈ ಶಾಸನದ ರೂವರಿ, ಲಿಪಿಕಾರ, ಹಾಗು ಶಾಸನ ಕವಿ ಯಾರೆಂಬುದು ತಿಳಿಯುವುದಿಲ್ಲ. ಶಿವಸ್ತುತಿಯ ನಂತರ ಹೊಯ್ಸಳ 2ನೇ ವೀರಬಲ್ಲಾಳನ ಸ್ತುತಿ ಜೊತೆಗೆ ಆತನ ಅರಸಿ **'ಅಭಿನವಕೇತಾಲಮಹಾದೇವಿ'**ಯ ಸ್ತುತಿ ಈ ಶಾಸನದಲ್ಲಿ ಕಂಡುಬರುತ್ತದೆ. ಆನಂತರ ರಾಜನ ಆಪ್ತ ಸಹಾಯಕನಾಗಿದ್ದ ರಾವುತ್ರಾರಸನ ವರ್ಣನೆ ಇದೆ. ಇದಾದ ಮೇಲೆ ದತ್ತಿ ವಿಚಾರ ಕೊನೆಯಲ್ಲಿ ಶಾಪ ವಾಕ್ಯವಿರುವುದನ್ನು ಗಮನಿಸಬಹುದಾಗಿದೆ.

ಈ ಶಾಸನದ ವೇಳೆಗೆ ವೀರ ಬಲ್ಲಾಳನ ಆಪ್ತ ಸಹಾಯಕ ಹಿರಿಯ ದಂಡನಾಯಕ ಬದಲಾಗಿದ್ದ ಎನಿಸುತ್ತದೆ. ಎಕೆಂದರ ಇಲ್ಲಿ **"ಕುಮಾರಮಾಧವದಂಡನಾಯಕ"**ನ ಪ್ರಸ್ತಪವಿದೆ. ಆ ಕಾಲಕ್ಕೆ ಈ ದಂಡನಾಯಕ ಪ್ರಸಿದ್ಧನಾಗಿದ್ದ ಎನಿಸುತ್ತದೆ. ಈ ಕುಮಾರಮಾಧವನನ್ನು ಮಾಹಾಪ್ರಧಾನ, ವರ್ವಾಧಿಕಾರಿ, ಮಹಾಪಸಾಯತ, ಬಾಹತ್ತರನಿಯೋಗಾಧಿಪತಿ, ಮತ್ತು ಅನೇಕದೇಶಾಧಿಪತಿ ಎಂದು ವರ್ಣಿಸಲಾಗಿದೆ. ಆತನೊಡನೆ ಕೇಶವದಣ್ಣಾನಾಯಕನ ಹೇಸರು ಈ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಅವರ ಪರಸ್ಪರ ಸಂಬಂಧ ತಿಳಿದಿಲ್ಲ. ನಾಲ್ಕು ನಾಡಿನ ಸಮಸ್ತ ಗೌಡರು ಸೇರಿ ಕಾಮೇಶ್ವರನಿಗೆ ಕುಂದೂರನ್ನ ದತ್ತಿ ಕೊಟ್ಟವಿಚಾರವಿದೆ. ಕೊನೆಗೆ ಶಾಪ ವಾಕ್ಯವಿದೆ.

- **ಕಲ್ಲಂಬಾಳಿನ ದೇವಾಲಯದ ಬಳಿಯಿರುವ 3ನೇ ಶಾಸನ:**

ಈ ಶಾಸನ ಕಾಮೇಶ್ವರ ದೇವಾಲಯದ ಮುಂದೆ ನೆಡಲಾಗಿದೆ. ಇದು ಶಿಲಾಶಾಸನವಾಗಿದ್ದು ಕಾಮೇಶ್ವರ ದೇವಾಲಯದ ಜೀರ್ಣೋದ್ದಾರ ಮಾಡಿದ್ದ ಉಲ್ಲೇಖವಿದೆ. ಜೊತೆಗೆ ಜೀರ್ಣೋದ್ಧಾರ ಮಾಡಿಸಿದವರ ವಂಶದ ವಿವರ ನೀಡಲಾಗಿದೆ.

**ಶಾಸನದ ಹಿನ್ನೆಲೆ–ಕಾಲ ಮತ್ತು ವಿಷಯ ವಸ್ತು:** ಈ ಶಿಲಾಶಾಸನವನ್ನ ಇಲ್ಲಿನ ದೇವಸ್ಥಾನದ ಮುಂದೆ ನೆಡಲಾಗಿದೆ. ಈ ಶಾಸನದಲ್ಲಿ ಎರಡು ಭಾಗವಿದ್ದು, ಮೊದಲನೆ ಭಾಗವು ತ್ರಿಭುಜಾಕಾರದಲ್ಲಿದೆ.ಅಲ್ಲಿ ಶಿವಲಿಂಗ, ಎಡಕ್ಕೆ ಗರಡಗಂಬ ರೀತಿ ಇದೆ. ಲಿಂಗದ ಬಲಕ್ಕೆ ಮಹಿಳೆ ಏನ್ನನ್ನೋ ಹಿಡಿದಿರುವುದು, ಇದರ ಪಕ್ಕ ಬಸವ ಇದೆ. ಎರಡನೇ ಭಾಗ ಹಾಸುಗಲ್ಲು ಇಲ್ಲಿ ಬರಹವಿದೆ.

ಶಾಸನದಲ್ಲಿ ಕಾಲದ ಉಲ್ಲೇಖವಿದೆ. ಕಾಳಯುಕ್ತಿ ಸಂವತ್ಸರದ ನಿಜ ಆಶ್ವೀಜ ಸೋಮವಾರ ಅಂದರೆ 1738 ಅಕ್ಟೋಬರ್ 16ಕ್ಕೆ ಸರಿ ಹೊಂದತ್ತದೆ. ಈ ಶಾಸನದ ಮೊದಲು ಪಾರ್ವತಿ ಪರಮೇಶ್ವರರ ಸ್ತುತಿ ಕಂಡುಬರುತ್ತದೆ.

**"ಸುಭಮಸ್ತು ವಾಗ್ಗಥಾಯಾವಸಪತೌ ವಾಗ್ಗತ್ತಃ ಪ್ರತಿಪದ್ಯತೇ**

**ಜಗತಃ ಪಿತರಂ ವಂದೇ ಪಾರ್ವತಿಪರಮೇಶ್ವರೌ.."**

ನಂತರ ಶಾಸನ ಹಾಕಿಸಿದ ಕಾಲವನ್ನ ಹೇಳಿ ಕಲ್ಲಂಬಾಳಿನ ಇನ್ನೊಂದು ಹೆಸರಿನ ಉಲ್ಲೇಖ ಮಾಡಲಾಗಿದೆ. **"ಸಿಲೆಪುರ"** ಎಂಬುದು ಕಲ್ಲಂಬಾಳಿನ ಪ್ರತಿಣಮಧೇಯ ಎಂದಿದೆ. ಕಲ್ಲಂಬಾಳಿನ ಕಾಮೇಶ್ವರ ದೇವಸ್ಥಾನ ಸಿಥಿಲವಾಗಿದ್ದಾರಿಂದ ಜೀರ್ಣೋದ್ಧಾರ ಮಾಡಿಸಲಾಗಿತ್ತು. ಆದರೂ ಸಹ ಪುನಃ ಕಪ್ಪಣಗೌಡ ಎಂಬುವವನು ಈ ದೇವಾಲಯವನ್ನ ಜೀರ್ಣೋದ್ಧಾರ ಮಾಡಿದ ಉಲ್ಲೇಖ ಈ ಶಾಸನದಲ್ಲಿದೆ. ಜೊತೆಗೆ ಆತನ ವಂಶದ ವಿವರ ನೀಡಲಾಗಿದೆ.

ಕಲ್ಲಹಳ್ಳಿ ಕುಲದ– ಕಂನಪ್ಪ ಲಿಂಗೇಗೌಡ, ಇತನ ಮಗ ಕಪ್ಪಣ ಗೌಡ, ಇತನ ಮಗ ಸಂಬುಗಗೌಡ, ಇತನ ಮಗ ಕಪ್ಪಣಗೌಡ ಎಂಬುವವನು ಜೀರ್ಣೋದ್ಧಾರ ಮಾಡಿಸಿದ ದೇವಸ್ಥಾನ ಶಿಥಿಲವಗಿದ್ದ ಕಾರಣ ಪುನಃ ಜೀರ್ಣೋದ್ಧಾರ ಮಾಡಿಸಿದ್ದ ಉಲ್ಲೇಖವಿದೆ. ಆದರೆ ಆತನ ಊರು ಯಾವುದು ಎಂಬುದರ ಬಗ್ಗೆ ತಿಳಿಸಿಲ್ಲ. ಜೊತೆಗೆ ಶಾಸನದ ರೂವಾರಿ, ಶಾಸನ ಕವಿ, ಮತ್ತು ಲಿಪಿಕಾರ ಯಾರೆಂಬುದು ತಿಳಿದು ಬಂದಿಲ್ಲ. ಇದೊಂದು ಗದ್ಯಶಾಸನವಾಗಿದೆ.

ಕಲ್ಲಂಬಾಳಿನ ಕಾಮೇಶ್ವರ ದೇವಾಸ್ಥಾನದ ಬಳಿ ಆ ಶಾಸನಗಳ ಜೊತೆಗೆ ಇನ್ನೂ ಕೆಲವು ಶಾಸನಗಳಿವೆ. ಅವುಗಳಲ್ಲಿ ಹುರದ ಮಾದವನಾಯಕರ ಮಕ್ಕಳು ದೊಡ್ಡಮಲ್ಲರಾಜ ಒಡೆಯರಿಗೆ ಪುಣ್ಯವಾಗಲಿಯೆಂದು.... ಎಂದಿದೆ ಇದರ ಮುಂದಿನ ಬರಹಗಳು ಹಾಳಗಿವೆ. ಇದರ ಕಾಲ 1559 ಮಾರ್ಚ್ 10 ಎಂದು ತಿಳಿದು ಬರುತ್ತದೆ. ಹಾಗಾಗಿ ಕಲ್ಲಂಬಾಳಿನ ಈ ದೇವಾಲಯ ಅಂದಿಗೂ– ಇಂದಿಗೂ ಪ್ರಸಿದ್ಧವಾಗಿದೆ ಎಂದು ಹೇಳಬಹುದು.

**ಕಲ್ಲಂಬಾಳಿನ ಶಾಸನಗಳ ಮಹತ್ವ:**

- ಕಲ್ಲಂಬಾಳಿನ ಇತಿಹಾಸ ಕಟ್ಟಿಕೊಡುವಲ್ಲಿ ಮತ್ತು ಕಾಮೇಶ್ವರ ದೇವಸ್ಥಾನದ ಮಹತ್ವವನ್ನು ಈ ಶಾಸನಗಳು ನೆರವಾಗುತ್ತದೆ.
- ಈ ಕಲಿಯುಗ ಕಾಮೇಶ್ವರ ದೇವಾಲಯ ಕ್ರಿ.ಶ.1180ಕ್ಕೂ ಹಿಂದೆಯೇ ನಿರ್ಮಾಣವಾಗಿತ್ತೆಂದು ಈ ಶಾಸನಗಳಿಂದ ತಿಳಿದು ಬರುತ್ತದೆ.
- ಹೊಯ್ಸಳ ವೀರಬಲ್ಲಾಳ, ಗೋವಿಂದಮಯ್ಯ, ಮಂಚಯ್ಯ ದಂಡನಾಯಕ, ಹಾಗೂ ಕುಮಾರಮಾಧವದಂಡನಾಯಕ ಮೊದಲಾದ ಚರಿತ್ರಿಕ ಪುರುಷರ ಉಲ್ಲೇಖವಿದೆ.
- ಇನ್ನೊಂದು ಶಾಸನದಲ್ಲಿ 2ನೇ ವೀರಬಲ್ಲಾಳನ ಅರಸಿಅಭಿನವಕೇತಲಮಹಾದೇವಿಯ ಪ್ರಸ್ತಪವಿದೆ.
- ಈ ಶಾಸನಗಳಲ್ಲಿ ಅಂಗಭೋಗ ಮತ್ತು ರಂಗಭೋಗ ಎಂಬ ಮೊಲಾದ ಪಾರಿಭಾಷಿಕ ಶಬ್ಧಗಳು ಬಳಕೆಯಲ್ಲಿದೆ.
- ಆ ಕಾಲಕ್ಕೆ ಕಲ್ಲಂಬಾಳು ಗ್ರಾಮ ವ್ಯಾಪಾರಗಾರರನ್ನು ಒಳಗಂಡ ಒಂದು ಪುಟ್ಟ ನಗರವಾಗಿತ್ತೆಂದು ತಿಳಿಯಬಹುದಾಗಿದೆ.
- ಈ ಶಾಸನಗಳು ಸಾಂಸ್ಕೃತಿಕ ದಾನಗಳನ್ನು ಮಾತ್ರ ಉಲ್ಲೇಖಿಸುತ್ತದೆ. ಈ ಮೇಲಿನ ಮಹತ್ವದ ಜೊತೆಗೆ ಚಾರಿತ್ರಿಕ ಮಹತ್ವ, ಧಾರ್ಮಿಕ ಹಾಗೂ ಭಾಷಿಕ ಮಹತ್ವವನ್ನು ಈ ಶಾಸನಗಳು ಹೊಂದಿವೆ.

**ಚಾರಿತ್ರಿಕ ಮತ್ತು ಧಾರ್ಮಿಕ ಮಹತ್ವ:** ಪ್ರಸ್ತುತ ಕಲ್ಲಂಬಾಳಿನ ಶಾಸನಗಳು ಯಾವುದೇ ವಿಜಯ, ಪ್ರಶಸ್ತಿ, ಯುದ್ಧಗಳನ್ನ ಕುರಿತದ್ದಲ್ಲ. ಆದರೂ ಈ ಶಾಸನಗಳು ಅನೇಕ ಚಾರಿತ್ರಿಕ ವ್ಯಕ್ತಿಗಳ ಉಲ್ಲೇಖಕೊಂಡಿದೆ.

ಮೊದಲ ವ್ಯಕ್ತಿ ಎಂದರೆ– **'2ನೇ ವೀರಬಲ್ಲಾಳ'** (1173–1220) ಈತ ಕ್ರಿ.ಶ. 1173ರಲ್ಲಿ ಆಳ್ವಿಕೆಗೆ ಬರುತ್ತಾನೆ. ಈ ನುಗುನಾಡು ಕ್ರಿ.ಶ.1180ರ ವರೆಗೂ ಚೋಳ ಆಧೀನದಲ್ಲಿತ್ತು ನಂತರದಲ್ಲಿ ಹೊಯ್ಸಳ ಕೈಸೇರಿತು, ಹಾಗಾಗಿ ಈ ಎರಡನೇ ವೀರಬಲ್ಲಾಳನು ಆಳುತ್ತಿದ್ದನು. ಈತನ ಕಾಲದಲ್ಲೆ ಕಲ್ಲಂಬಾಳಿನಲ್ಲಿ ಎರಡು ಶಾಸನಗಳನ್ನ ಹಾಕಿಸಲಾಗಿದೆ. ಈ ಶಾಸನಗಳಲ್ಲಿ ಈತನ ಬಿರುದು ಬಾವಲಿಗಳನ್ನ ವರ್ಣಿಸಲಾಗಿದೆ. ಕಲ್ಲಂಬಾಳಿನಲ್ಲಿರುವ ಇನ್ನೊಂದು ಶಾಸನ 2ನೇ ವೀರಬಲ್ಲಾಳನ ಪಿರಿಯರಸಿ**'ಅಭಿನವಕೇತಾಲದೇವಿ'**ಯ ಉಲ್ಲೇಖವಿದೆ. ಜೊತೆಗೆ ನುಗುನಾಡಿನ ಸರ್ವಾಧಿಕಾರಿಯಾಗಿದ್ದ ಹಾಗೂ ಹೊಯ್ಸಳರ ಅಧೀನದಲ್ಲಿದ್ದ ಅಲ್ಲದೆ ವೀರಬಲ್ಲಾಳನ ಆಪ್ತಸಹಾಯಕನಾಗಿದ್ದ **'ಕುಮಾರಮಾಧವದಂಡನಾಯಕನ'** ಸ್ತುತಿ ಕಂಡುಬರುತ್ತದೆ. ಇತನ ಬಿರುದುಗಳನ್ನು ತಿಳಿಸಲಾಗಿದೆ ಹಾಗಾಗಿ ಆ ಕಾಲಕ್ಕೆ ಈತ ಪ್ರಸಿದ್ಧ ಹಾಗೂ ದಕ್ಷ ನಾಯಕನಾಗಿದ್ದ ಎನಿಸುತ್ತದೆ.

ಈ ಶಾಸನಗಳಲ್ಲಿ ಮೊದಲು ಶಿವಸ್ತುತಿ, ನಂತರ ರಾಜ, ಮಾಂಡಲೀಕ, ಸಾಮಂತ, ಆನಂತರ ದಂಡನಾಯಕ ಹೀಗೆ ಕ್ರಮವಾದ ಉಲ್ಲೇಖ ಹೊಗಳಿಗಳು ಶಾಸನಗಳಲ್ಲಿ ಕಾಣಬಹುದಾಗಿದೆ.

**ಧಾರ್ಮಿಕಹಿನ್ನೆಲೆ:** ಈ ಶಾಸನಗಳು ಧಾರ್ಮಿಕ ಹಿನ್ನೆಲೆಯ ಶಾಸನಗಳಾಗಿವೆ. ಇವು ಶೈವ ಧರ್ಮಕ್ಕೆ ಸೇರಿದ ಶಾಸನಗಳು. ಇಲ್ಲಿರುವ ಶಾಸನಗಳಲೆಲ್ಲ ಶಿವಲಿಂಗದ ಕೆತ್ತನೆ ಕಂಡುಬರುತ್ತದೆ. ಈ ಶಾಸನಗಳು 11ನೇ ಶತಮಾನದ ಅಂತ್ಯಭಾಗ ಅಥವಾ 12ನೇ ಶತಮಾನದ ಪ್ರಾರಂಭಕ್ಕೆ ಬರುತ್ತವೆ. ಹಾಗಾಗಿ ಆ ಕಾಲಕ್ಕೆ ಕಾಳಮುಖ ಪಂಥದ ಶೈವರು ಪ್ರಬಲರಾಗಿದ್ದರಿಂದ ಈ ದೇವಲಾಯವು ಕಾಳಮುಖ ಪಂಥಕ್ಕೆ ಸೇರಿರಬಹುದು ಎಂದು ಊಹಿಸಬಹುದಾಗಿದೆ.

ಕಲ್ಲಂಬಾಳಿನ ಕಾಮೇಶ್ವರ ದೇವಾಲಯದಲ್ಲಿ ಆ ಕಾಲಕ್ಕೆ – ಸಂಗೀತ, ನೃತ್ಯ, ನಾಟಕ ಇತ್ಯಾದಿಗಳು ಇಲ್ಲಿನ ರಂಗಮಂಟಪದಲ್ಲಿ ನಡೆಯುತ್ತಿದ್ದವೆಂಬುದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತವೆ. ಶಾಸನಗಳಲ್ಲಿ ಉಲ್ಲೇಖವಾಗಿರುವ 'ಅಂಗಭೋಗ' ಮತ್ತು 'ರಂಗಭೋಗ' ಎಂಬ ಪದಗಳಿಂದ ತಿಳಿಯುತ್ತದೆ.

ಸಾಮಾಜಿಕವಾಗಿಯು ಈ ಶಾಸನಗಳು ಪ್ರಮುಖ್ಯತೆ ಪಡೆದಿವೆ. ಶಾಸನದಲ್ಲಿ 'ನುಗುನಾಡು' ಎಂದು ಬಳಸಲಾಗಿದೆ. ಹೆಚ್.ಡಿ.ಕೋಟೆಯ ಕೆಲವು ಭಾಗವನ್ನು ನುಗುನಾಡು ಎಂದು ಕರಯಲಾಗುತ್ತಿತ್ತು. ಇದು ಕಬನಿ ನದಿಯ ಉಪನದಿಯಾಗಿದೆ. ಈ ಕಾಮೇಶ್ವರ ದೇವಸ್ಥಾನ ಈ ನದಿಯ ಉತ್ತರಕ್ಕಿದೆ.

**ಶಾಸನಗಳ ಭಾಷಿಕ ಮಹತ್ವ:** ಪ್ರಸ್ತುತ ಶಾಸನಗಳಲ್ಲಿ ಸಂಸ್ಕೃತದ ಶ್ಲೋಕಗಳಿವೆ. (ಬಾಣನ ಹರ್ಷಚರಿತ್ರೆ) ಉಳಿದ ಭಾಗ ಕನ್ನಡದಲ್ಲಿದೆ. ಇದು 12ನೇ ಶತಮಾನದ ಲಿಪಿ ಎಂದು ಹೇಳಬಹುದು. ಸಾಮಾನ್ಯವಾಗಿ ಈ ಕಾಲದ ಶಾಸನಗಳಲ್ಲಿ ಕಂಡುಬರುವ ಆಡಂಬರದ ಆಲಂಕಾರಿಕ ಭಾಷಾ ಸ್ವರೂಪವೇ ಕಲ್ಲಂಬಾಳಿನ ಶಾಸನಗಳಲ್ಲಿಯೂ ಕಂಡುಬರುತ್ತದೆ. ಇಲ್ಲಿನ ಶಾಸನಗಳ ಕವಿ, ಲಿಪಿಕಾರ, ರೂವಾರಿಯ ಬಗ್ಗೆ ಉಲ್ಲೇಖವಿಲ್ಲ. ಇಲ್ಲಿನ ಶಾಸನಗಳು ಭಾಷಿಕ ದೃಷ್ಟಿಯಿಂದ ಕೆಲವು ವಿಶೇಷತೆಯನ್ನು ಒಳಗೊಂಡಿವೆ.

1. ಈಶಾಸನದ ಕೆಲವು ಕಡೆ ರೇಫೆಯ ಹಿಂದಿನ ಅಕ್ಷರ–ದ್ವಿತ್ವವಾಗಿರುವುದುಂಟು.
   ಉದಾ: ಸುಖದಿನಾಳುತ್ತಯಿರ್ದ್ದು, ಪವುರ್ಣ್ನಮಿ
   ಚಂದ್ರಾರ್ಕ್ಕತಾರಂಬರ, ಸರ್ಬ್ಬ
2. 'ಲ'ಕಾರಕ್ಕೆ ಬದಲಾಗಿ ಕೆಲವುಕಡೆ 'ಳ'ಕಾರ ಬಳಕೆಯಾಗಿದೆ.
   ಉದಾ; ಕಲ್ಲಹಳ್ಳಿ ಕುಳ, ಯಾದವಕುಳಾಂಬರ
3. ಗೌಡ ಪದದ ನಿಷ್ಪತ್ತಿ ಈ ಶಾಸನದಲ್ಲದೆ. ಗವುಡ>ಗಾಉಂಡ>ಗಉಡ>ಗೌಡ
4. ಕೆಲವೆಡೆ ದ್ವಿತ್ವದ ಜೊತೆ ಅನುನಾಸಿಕವೂ ಸೇರಿದೆ.
   ಉದಾ: ದಂಣ್ನಾನಾಯಕ
5. 'ಶ'ಕಾರಕ್ಕೆ ಬದಲಾಗಿ 'ಸ'ಕಾರ ಕೆಉವೆಡೆ ಕಂಡುಬರುತ್ತದೆ. (ಶಕ>ಸಕ)

ಹೀಗೆ ಕಲ್ಲಂಬಾಳಿನ ಕಲಿಯುಗ ಕಾಮೇಶ್ವರ ದೇವಸ್ಥಾನ ಬಳಿ ದೊರೆತಿರುವ ಈ ಶಾಸನಗಳು ಚಾರಿತ್ರಿಕ, ಧಾರ್ಮಿಕ,ಸಾಮಾಜಿಕ ಮತ್ತು ಭಾಷಿಕ ಮಹತ್ವವನ್ನು ಒಳಗೊಂಡಿವೆ. ಒಟ್ಟಾರೆಯಾಗಿ ಈಶಾಸನಗಳು ಕಲ್ಲಂಬಾಳಿನ ಹಾಗೂ ಕಾಮೇಶ್ವರ ದೇವಾಲಯದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕಟ್ಟಿಕೊಡುವಲ್ಲಿ ಈ ಶಾಸನಗಳು ಮೂಕ ಸಾಕ್ಷಿಯಂತಿವೆ.

ಇಂತಹ ಐತಿಹಾಸಿಕ ಹಿನ್ನೆಲೆಯನ್ನ ಹೊಂದಿರುವ ಕಲ್ಲಂಬಾಳಿನ ಕಾಮೇಶ್ವರ ದೇವಾಲಯ ಇಂದು ಶೋಚನೀಯ ಸ್ಥಿತಿಯಲ್ಲಿದೆ. 12ನೇ ಶತಮಾನದ ಹೊತ್ತಿಗೆ ಅಥವಾ ಅದಕ್ಕೂ ಮುಂಚೆ ಚೋಳರ ಕಾಲದಲ್ಲೆ ನಿರ್ಮಾಣವಾಗಿ, ಹೊಯ್ಸಳರ ಕಾಲಕ್ಕೆ ಅನೇಕ ದಾನ, ದತ್ತಿಗಳನ್ನ ಪಡೆದು ಆ ಕಾಲಕ್ಕೆ 'ಕಲಿಯುಗ ಕಾಮೇಶ್ವರ', 'ಯಜ್ಞ ಕಾಮೇಶ್ವರ' ಎಂದೇ ಖ್ಯಾತವಾಗಿದ್ದ ಸು.850 ವರ್ಷಗಳ ಪ್ರಾಚೀನ ದೇವಾಲಯ ಇಂದು ಹಳಿವಿನಂಚಿನಲ್ಲಿರುವುದು ದುರದೃಷ್ಟಕರ ಸಂಗತಿಯಾಗಿದೆ. ಶಾಸನದ ಪ್ರಕಾರ ಕ್ರಿ.ಶ.1738ರಲ್ಲಿ ಜೀರ್ಣೋದ್ಧಾರಗೊಂಡಿದ್ದ ಈ ದೇವಸ್ಥಾನ ಇನ್ನೂ ಅಂದರೆ ಮೂರು ಶತಮಾನ ಕಳೆದರು ಇನ್ನೂ ಜೀರ್ಣೋದ್ಧಾರಗೊಂಡಿಲ್ಲವೆಂಬುದು ವಿಪರ್ಯಾಸದ ಸಂಗತಿಯಾಗಿದೆ.

**ಋಣ ಗ್ರಂಥಗಳು**

1. ಎಫಿಗ್ರಾಫಿಯ ಕರ್ನಾಟಕ ಸಂಪುಟ–3, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
2. 2. ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ ಚಿದಾನಂದ ಮೂರ್ತಿ, ಸಪ್ನಬುಕ್‌ಹೌಸ್, ಬೆಂಗಳೂರು.
3. 3. ಶಾಸನ ಮತ್ತು ಗದ್ಯ, ಹು.ಕಾ. ಜಯದೇವ್, ಸಪ್ನ ಬುಕ್‌ಹೌಸ್, ಬೆಂಗಳೂರು.
4. ಹೆಗ್ಗಡದೇವನಕೋಟೆ ತಾಲೂಕು ಗ್ಯಾಸಿಟಿಯರ್, ನೀ. ಗಿರೀಗೌಡ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.